# ರಾಮಕೃಷ್ಣ ಭಾವಧಾರೆಯಲ್ಲಿ ಆಧ್ಯಾತ್ಮಿಕ ಶಿಬಿರಗಳು ಮತ್ತು ವಿಚಾರ ಸಂಕಿರಣಗಳು

**ಸ್ವಾಮಿ ಮಹಾಮೇಧಾನಂದ**

ವ್ಯಕ್ತಿತ್ವ ಬೆಳವಣಿಗೆಯಲ್ಲಿ ಶಿಬಿರ, ವಿಚಾರ ಸಂಕಿರಣ, ಕಾರ್ಯಾಗಾರಗಳು ಮಹತ್ತರ ಪಾತ್ರ ವಹಿಸುತ್ತವೆ. ಈ ಹಿನ್ನೆಲೆಯಲ್ಲಿ ರಾಮಕೃಷ್ಣ ಆಶ್ರಮಗಳು ನಡೆಸುವ ವಿವಿಧ ಕಾರ್ಯಕ್ರಮಗಳು ಯುವಕರನ್ನೂ, ಭಕ್ತರನ್ನೂ ಆಕರ್ಷಿಸುತ್ತವೆ. ಈ ಕುರಿತು ಇಲ್ಲಿ ವಿವರಿಸುವ ಲೇಖಕರು ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಮಾಸಪತ್ರಿಕೆ 'The Vedanta Kesari'ಯ ಸಂಪಾದಕರಾಗಿದ್ದರು. ಪ್ರಸ್ತುತ ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾಗಿರುವ ಅವರು ಉತ್ತಮ ವಾಗ್ಮಿಗಳು ಹಾಗೂ ದಕ್ಷ ಆಡಳಿತಗಾರರು.



ಆಧ್ಯಾತ್ಮಿಕ ಶಿಬಿರ, ರಿಂಸೆ, ಮೈಸೂರು

**ಮಾ**ನವ ಸಮಾಜ ಸರದಿಯಂತೆ ಆಧ್ಯಾತ್ಮಿಕತೆಯ ನೆಲೆಯಲ್ಲಿ, ನಂತರ ಭೌತಿಕತೆಯ ನೆಲೆಯಲ್ಲಿ ಬೆಳೆಯುತ್ತದೆ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಪ್ರಾಪಂಚಿಕತೆಯು ಮೇಲುಗೈಯಾದಾಗ ವಿಷಯಭೋಗಗಳನ್ನು ಗಳಿಸುವಂತಹ ವಿದ್ಯಾಭ್ಯಾಸ ಹಾಗೂ ಕರ್ಮಗಳು ವೈಭವೀಕೃತವಾಗುತ್ತದೆ. ಈ ಭೌತಿಕ ವೈಭವ ಮನುಷ್ಯನಲ್ಲಿರುವ ಅಸೂಯೆ, ದ್ವೇಷಗಳನ್ನು ಉಲ್ಬಣಗೊಳಿಸುತ್ತದೆ, ಹಾಗೂ ಕ್ರೂರ ಸ್ಪರ್ಧಾತ್ಮಕ ಭಾವ ಮತ್ತು ನೀಗದ ಹಣದ ದಾಹ ಸಮಾಜದಲ್ಲಿ ತಾಂಡವವಾಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸಮಾಜ ಆಧ್ಯಾತ್ಮಿಕ ನೆಲೆಗಾಗಿ ಪರಿತಪಿಸುತ್ತದೆ.

ಇಂತಹ ಆಧ್ಯಾತ್ಮಿಕ ತಿರುವನ್ನು ನೀಡಲೆಂದೇ ಬಂದವರು ಶ್ರೀರಾಮಕೃಷ್ಣಪರಮಹಂಸರು. ಸಾಧನಾನಂತರದ ಅವರ ಜೀವನವೆಲ್ಲಾ ಸಹಮಾನವರಿಗೆ ಆಧ್ಯಾತ್ಮಿಕ ವಿಕಾಸ ಹೊಂದುವ ರೀತಿ-ನಿಯಮಗಳನ್ನು ತಿಳಿಸಿಕೊಡುವುದರಲ್ಲೇ ಕಳೆಯಿತು. ಇದಲ್ಲದೆ ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರು ಮತ್ತು ಇತರ ಶಿಷ್ಯರನ್ನೂ ಕೂಡ ಈ ನಿಟ್ಟಿನಲ್ಲೇ ತಯಾರು ಮಾಡಿ ನಿಯೋಜಿಸಿದರು. ದಕ್ಷಿಣೇಶ್ವರದ ಕಾಳೀಮಂದಿರದಲ್ಲಿ ಹಗಲಿರುಳು ವೇದ-ಪುರಾಣಗಳನ್ನು ದೃಢೀಕರಿಸುವ ತಮ್ಮ ಆಧ್ಯಾತ್ಮಿಕ ದಿವ್ಯ ಅನುಭವ ಸಾರವನ್ನು ತಂಡೋಪತಂಡವಾಗಿ ಬಂದ ಭಕ್ತರಿಗೆ-ಶಿಷ್ಯರಿಗೆ ಮಾತೃ ಪ್ರೇಮದಿಂದ ಉಣಬಡಿಸುತ್ತಿದ್ದರು.

ಈ ಜ್ಞಾನದಾಸೋಹವನ್ನು ಬಳುವಳಿಯಾಗಿ, ಆಧ್ಯಾತ್ಮಿಕ ಜವಾಬ್ದಾರಿಯಾಗಿ ಪಡೆದಿರುವ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್, 'ಶಿವ ಜ್ಞಾನೇ ಜೀವ ಸೇವಾ' ಎಂಬ ಭಾವದಲ್ಲಿ ಸಹಸ್ರಾರು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಹಾಗೂ ವಿವಿಧ ಕ್ಷೇತ್ರಗಳ ಕರ್ಮಚಾರಿಗಳಿಗಾಗಿ ಆಧ್ಯಾತ್ಮಿಕ ಹಾಗೂ ನೈತಿಕ ಶಿಕ್ಷಣದ ಕಾರ್ಯಾಗಾರಗಳನ್ನು ನಡೆಸುತ್ತಿವೆ. ಕರ್ನಾಟಕದಲ್ಲಿಯೂ ಸಹ ಬೇಲೂರು ಮಠದ(ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರ) ೧೦ ಶಾಖೆಗಳು ಹಾಗೂ ಅನೇಕ ಖಾಸಗಿ ಆಶ್ರಮಗಳು ಇಂತಹ ಕಾರ್ಯಾಗಾರಗಳನ್ನು ನಡೆಸಿಕೊಂಡು ಬರುತ್ತಿವೆ. ಈ ಚಟುವಟಿಕೆಗಳ ಒಂದು ಸಂಕ್ಷಿಪ್ತ ಪರಿಚಯವನ್ನು ಮಾಡುವ ಪ್ರಯತ್ನ ಈ ಲೇಖನ.

## ಆಧ್ಯಾತ್ಮಿಕ ಶಿಬಿರಗಳು

ಶ್ರೀರಾಮಕೃಷ್ಣರು ಭಕ್ತರಿಗೆ ಆಗಾಗ ಏಕಾಂತವಾಸದಲ್ಲಿರುವಂತೆ ಪ್ರೇರೇಪಿಸುತ್ತಿದ್ದರು. ಏಕಾಂತವಾಸದ ಮುಖ್ಯ ಉದ್ದೇಶವೆಂದರೆ ದೈನಂದಿನ ಕೆಲಸಕಾರ್ಯಗಳನ್ನು, ಸಂಸಾರದ ಸಂಬಂಧಗಳನ್ನು ಸ್ವಲ್ಪ ಸಮಯವಾದರೂ ದೂರವಿಟ್ಟು, ಭಗಂತನ ಸ್ಮರಣೆ, ನಾಮಜಪ, ಭಜನೆ, ನಿತ್ಯ-ಅನಿತ್ಯ ವಸ್ತು ವಿಚಾರ ನಿರತರಾಗಿರುವುದು. ಇದೇ ಯೋಗದಲ್ಲಿ ಹೇಳಿರುವ ಪ್ರತ್ಯಾಹಾರದ ಅಭ್ಯಾಸ. ಭಕ್ತರಿಗೆ ಇಂತಹ ಅವಕಾಶ ಒದಗಿಸಿಕೊಡಲು ರಾಮಕೃಷ್ಣ ಆಶ್ರಮಗಳು ಒಂದು ಅಥವಾ ಇನ್ನೂ ಹೆಚ್ಚಿನ ದಿನಗಳ ಆವಾಸಿಕ ಆಧ್ಯಾತ್ಮಿಕ ಶಿಬಿರಗಳನ್ನು ಆಯೋಜಿಸುತ್ತಿವೆ.

ರಾಮಕೃಷ್ಣ ಸಂಘದ ಒಂದು ವೈಶಿಷ್ಟ್ಯವೆಂದರೆ ನಾಲ್ಕು ಸಾಧನಾ ಯೋಗಗಳಾದ ಜ್ಞಾನ, ಭಕ್ತಿ, ರಾಜ, ಕರ್ಮಗಳ ಸಮನ್ವಯ. ಇದರಂತೆ ಶಿಬಿರಾರ್ಥಿಗಳು ಅಧ್ಯಯನ, ಭಜನೆ-ಪಾರಾಯಣ, ಧ್ಯಾನ, ಕೈಂಕರ್ಯಗಳಲ್ಲಿ ತೊಡಗಿರುತ್ತಾರೆ. ರಾಮಕೃಷ್ಣ ಸಂಘದ ಸಂನ್ಯಾಸಿಗಳು ಮತ್ತು ವಿದ್ವಾಂಸರು ಈ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳು. ಬೆಳಗಿನಿಂದ ಸಂಜೆಯವರೆಗೂ ನಡೆಯುವ ಈ ಶಿಬಿರಗಳ ಕಾರ್ಯಕ್ರಮ ಸಾಮಾನ್ಯವಾಗಿ ಹೀಗಿರುತ್ತದೆ: ಪ್ರಾರ್ಥನೆ, ಉದ್ಘಾಟನೆ, ಪ್ರವಚನಗಳು, ಮಧ್ಯಾಹ್ನದ ಪ್ರಸಾದ, ಪ್ರಶ್ನೋತ್ತರ ಅವಧಿ, ಭಜನೆ ಮತ್ತು ಧ್ಯಾನ. ಸಂಜೆಯ ಲಘು ಉಪಾಹಾರದೊಂದಿಗೆ ಶಿಬಿರವು ಮುಕ್ತಾಯವಾಗುತ್ತದೆ. ಆವಾಸಿಕ ಶಿಬಿರಗಳಲ್ಲಿ ಮುಂಜಾನೆಯ ಯೋಗಾಸನ, ಪ್ರಾರ್ಥನೆ-ಭಜನೆ ಮತ್ತು ಧ್ಯಾನ. ಸಂಜೆಯ ಪ್ರಾರ್ಥನೆ-ಭಜನೆ, ಸಂನ್ಯಾಸಿಗಳೊಂದಿಗೆ ಪ್ರಶ್ನೋತ್ತರ – ಇವುಗಳು ಸೇರುತ್ತವೆ. ಅಂತರ್ಮುಖಿಗಳಾಗುವಲ್ಲಿ ಆವಾಸಿಕ ಶಿಬಿರಗಳು ಹೆಚ್ಚಿಗೆ ಪ್ರಾಯೋಜಕರ. ಇಂತಹ ಒಂದು ದಿನದ ಹಾಗೂ ಆವಾಸಿಕ ಆಧ್ಯಾತ್ಮಿಕ ಶಿಬಿರಗಳನ್ನು ಬೆಂಗಳೂರಿನ ಬಸವನಗುಡಿಯ ಆಶ್ರಮ, ಹಲಸೂರಿನ ಆಶ್ರಮ, ಮೈಸೂರಿನ ಆಶ್ರಮ, ಪೊನ್ನಂಪೇಟೆಯ ಆಶ್ರಮ, ಹಾಗೂ ಮಂಗಳೂರಿನ ಆಶ್ರಮಗಳು ಸುಮಾರು ೫೦-೧೦೦ ವರ್ಷಗಳಿಂದ ನಡೆಸಿಕೊಂಡು ಬರುತ್ತಿವೆ. ಉಳಿದ ಬೇಲೂರು ಮಠದ ಕರ್ನಾಟಕದ ಶಾಖೆಗಳು ಹಾಗೂ ತುಮಕೂರು, ಗದಗ, ದಾವಣಗೆರೆ ಮುಂತಾದ ಸ್ಥಳಗಳಲ್ಲಿರುವ ರಾಮಕೃಷ್ಣ-ವಿವೇಕಾನಂದ ಆಶ್ರಮಗಳು ಸುಮಾರು ೨-೩ ದಶಕಗಳಿಂದ ಈ ಶಿಬಿರಗಳನ್ನು ನಡೆಸುತ್ತಿವೆ.

ಇಂತಹ ಶಿಬಿರಗಳಲ್ಲಿ ಕೆಲವನ್ನು ನಮೂನೆಯಾಗಿ ವಿಶದವಾಗಿ ತಿಳಿಯಬಹುದು. ರಾಮಕೃಷ್ಣ ಆಶ್ರಮ, ಮೈಸೂರಿನ ಸಂಸ್ಥೆಯಾದ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ(ರಿಂಸೆ)ಯು, ಅದರ ಹೆಸರೇ ಸೂಚಿಸುವಂತೆ, ಶಿಬಿರಗಳನ್ನು ನಡೆಸುವುದಕ್ಕಾಗಿ ಮುಡಿಪಿಟ್ಟ ಸಂಸ್ಥೆ. ೧೯೭೪ರಲ್ಲಿ ರಿಂಸೆ ಸ್ಥಾಪಿತವಾದ ಕಾಲದಿಂದ ಆರಂಭವಾದ ಆಧ್ಯಾತ್ಮಿಕ ಶಿಬಿರ ಪುರುಷರಿಗಾಗಿ ವರ್ಷಕ್ಕೆ ಎರಡು ಬಾರಿ ನಡೆಯುತ್ತಿತ್ತು. ಈ ಶಿಬಿರಗಳಲ್ಲಿ ಎಲ್ಲಾ ಧರ್ಮಗಳು, ಸನಾತನ ಧರ್ಮದ ಸಂಪ್ರದಾಯಗಳು, ಸಂತರ ಜೀವನ-ಸಂದೇಶಗಳು, ಉಪನಿಷತ್-ಭಗವದ್ಗೀತೆ-ಇತರ ವೇದಾಂತ ಗ್ರಂಥಗಳು, ಶ್ರೀರಾಮಕೃಷ್ಣ-ಶ್ರೀಮಾತೆ ಶಾರದಾದೇವ-ಸ್ವಾಮಿ ವಿವೇಕಾನಂದ ಮತ್ತು ಅವರ ಗುರುಭಾಯಿಗಳ ಜೀವನ-ಸಂದೇಶಗಳು ಇತ್ಯಾದಿ ವಿಷಯಗಳ ಪರಿಚಯ, ಅಧ್ಯಯನ ಮಾಡಲಾಗುತ್ತಿತ್ತು. ಇದರೊಂದಿಗೆ ಪ್ರಾರ್ಥನೆ-ಭಜನೆ-ಧ್ಯಾನ, ಯೋಗಾಸನ, ಸಂತರ ಚಿತ್ರ ಪ್ರದರ್ಶನ-ಇವುಗಳೂ ಇರುತ್ತಿದ್ದವು. ಈಗ ರಿಂಸೆಯಲ್ಲಿ ವರ್ಷವಿಡೀ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗೆ ನೈತಿಕ ಮತ್ತು ಆಧ್ಯಾತ್ಮಿಕ ಶಿಬಿರಗಳು ನಡಯುತ್ತವೆ. ‘ಅಂತರ್ಮುಖೀ ಭವ’ ಎಂಬ ಶಿರೋನಾಮೆಯಲ್ಲಿ ನಡೆಯುವ ಐದು ದಿನಗಳ ಆಧ್ಯಾತ್ಮಿಕ ಶಿಬಿರದ ಅಂಶಗಳೆಂದರೆ: ಯೋಗಾಸನ, ಪ್ರಾರ್ಥನೆ, ಶ್ರೀರಾಮಕೃಷ್ಣ-ಶ್ರೀಮಾತೆ ಶಾರದಾದೇವಿ-ಸ್ವಾಮಿ ವಿವೇಕಾನಂದ-ಸ್ವಾಮಿ ಬ್ರಹ್ಮಾನಂದರ ಸಂದೇಶದಿಂದ ಆಯ್ದ ವಿಷಯದ ಸ್ವಾಧ್ಯಾಯ, ತದನಂತರ ಸಂನ್ಯಾಸಿಗಳಿಂದ ಸ್ವಾಧ್ಯಾಯ ವಿಷಯದ ಆಸ್ವಾದ, ಚಿಂತನೆ-ಚರ್ಚೆ, ಆಯ್ದ ಉಪನಿಷತ್‌ನ ಪರಿಚಯ ಹಾಗೂ ಕೆಲವು ಶ್ಲೋಕಗಳ ಕಂಠಪಾಠ, ಸಂತರ ಜೀವನದ ಘಟನೆಗಳಿಂದ ಪ್ರೇರಣೆ-ಮಾರ್ಗದರ್ಶನ, ಭಗವದ್ಗೀತೆಯ ಪರಿಚಯ ಹಾಗೂ ಆಯ್ದ ಶ್ಲೋಕಗಳ ಕಂಟಪಾಠ, ಭಜನೆ, ಮಾರ್ಗದರ್ಶಿತ ಧ್ಯಾನ, ಜಪ, ಸ್ವಾಮಿಗಳೊಂದಿಗೆ ಪ್ರಶ್ನೋತ್ತರ, ಹಾಗೂ ಹೋಮ. ಈ ಆವಾಸಿಕ ಆಧ್ಯಾತ್ಮಿಕ ಶಿಬಿರಗಳನ್ನು ಪುರುಷರಿಗೆ ಮತ್ತು ಮಹಿಳೆಯರಿಗೆ ಸಾಮಾನ್ಯವಾಗಿ ತಿಂಗಳಿಗೊಮ್ಮೆ ಪ್ರತ್ಯೇಕವಾಗಿ ನಡೆಸಲಾಗುವುದು. ಇವುಗಳಲ್ಲಿ ಸಮಾಜದ ವಿಭಿನ್ನ ಸಂಪ್ರದಾಯಗಳಿಗೆ ಹಾಗು ಎಲ್ಲಾ ಆರ್ಥಿಕ ಸ್ತರಳಿಗೆ ಸೇರಿದ ಆಧ್ಯಾತ್ಮಿಕ ಪಿಪಾಸುಗಳು ಮತ್ತು ರಾಮಕೃಷ್ಣ ಸಂಘದ ದೀಕ್ಷಿತ ಭಕ್ತರುಗಳು ಸುಮಾರು ೧೦೦ರ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.

‘ಜಪಾತ್ ಸಿದ್ಧಿ’ ಎಂದು ಹೇಳುತಿದ್ದರು ಶ್ರೀಮಾತೆ ಶಾರದಾದೇವಿಯವರು. ಅದರಂತೆ ಬೆಳಗಾವಿಯ ಆಶ್ರಮ ರಾಮಕೃಷ್ಣ ಸಂಘದ ಗುರುಗಳಿಂದ ದೀಕ್ಷೆ ಪಡೆದ ಭಕ್ತರಿಗಾಗಿಯೇ ಐದು ದಿನಗಳ ‘ಜಪಯಜ್ಞ’ ಎಂಬ ಆಧ್ಯಾತ್ಮಿಕ ಶಿಬಿರವನ್ನು ನಡೆಸುತ್ತಿದೆ. ಮಂತ್ರಜಪ, ಭಜನೆ ಮತ್ತು ಸ್ವಾಮಿಗಳೊಡನೆ ಸಂವಾದ ಈ ಶಿಬಿರಗಳ ಅಂಶಗಳು. ವರ್ಷಕ್ಕೆ ನಾಲ್ಕು ಬಾರಿ ನಡೆಯುವ ಈ ಶಿಬಿರಗಳಲ್ಲಿ ಕರ್ನಾಟಕ ಮತ್ತು ಅಕ್ಕಪಕ್ಕದ ರಾಜ್ಯಗಳಿಂದ ಪ್ರತಿ ಶಿಬಿರವು ಸುಮಾರು ೧೦೦ ಮಂದಿ ಭಕ್ತರನ್ನು ಆಕರ್ಷಿಸುತ್ತಿದೆ.

ರಾಮಕೃಷ್ಣ ಆಶ್ರಮಗಳು ಮತ್ತು ರಾಮಕೃಷ್ಣ-ವಿವೇಕಾನಂದ ಆಶ್ರಮಗಳಲ್ಲಿ ನಡೆಯುವ ಈ ಶಿಬಿರಗಳು ಅಸಂಖ್ಯ ಜನರ ಆಧ್ಯಾತ್ಮಿಕ ವಿಕಾಸಕ್ಕೆ ಬಲ ನೀಡಿದೆ. ನೂರಾರು ಮಂದಿ ಮಂತ್ರ ದೀಕ್ಷೆಯನ್ನು ಪಡೆದಿದ್ದಾರೆ ಹಾಗೂ ಕೆಲವರು ಯುವಕರು ಮತ್ತು ಯುವತಿಯರು ತ್ಯಾಗದ ಪಥವನ್ನು ಆರಿಸಿ ಸಂನ್ಯಾಸಿ, ಸಂನ್ಯಾಸಿನಿಯರಾಗಿದ್ದಾರೆ.

ಸ್ವಾಮಿ ಯತೀಶ್ವರಾನಂದಜಿ, ಸ್ವಾಮಿ ಶಾಂಭವಾನಂದಜಿ, ಸ್ವಾಮಿ ಸೋಮನಾಥಾನಂದಜಿ, ಸ್ವಾಮಿ ಹರ್ಷಾನಂದಜಿ, ಸ್ವಾಮಿ ಪುರುಷೋತ್ತಮಾನಂದಜಿ, ಸ್ವಾಮಿ ಜಗದಾತ್ಮಾನಂದಜಿ, ಸುರೇಶಾನಂದಜಿ ಮುಂತಾದ ಸಂನ್ಯಾಸಿ ದಿಗ್ಗಜಗಳ ನೇತೃತ್ವದಲ್ಲಿ ನಡೆದು



'ಶ್ರದ್ಧಾ-ಮೇಧಾ-ಪ್ರಜ್ಞಾ' - ಮಂಗಳೂರು ಆಶ್ರಮ

ಬಂದ ಈ ಆಧ್ಯಾತ್ಮಿಕ ಶಿಬಿರಗಳು ಕ್ರಮೇಣ ಕರ್ನಾಟಕದಾದ್ಯಂತ ಹರಡುತ್ತಿವೆ. ಮುಂದಿನ ದಶಕಗಳಲ್ಲಿ ಶ್ರೀರಾಮಕೃಷ್ಣರ-ಶ್ರೀಮಾತೆ ಶಾರದಾದೇವಿಯವರ - ಸ್ವಾಮಿ ವಿವೇಕಾನಂದರ ವೇದಾಂತ ಸಂದೇಶವು ಸಹಸ್ರಾರು ಜನರ ಆಧ್ಯಾತ್ಮಿಕತೆಯನ್ನು ಉದ್ದೀಪಿಸಿ, ಅವರ ದೈನಂದಿನ ಜೀವನ ವನ್ನು ಬೆಳಗುವುದರಲ್ಲಿ ಸಂದೇಹವಿಲ್ಲ.

ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು ''ಯುವ ಪೀಳಿಗೆಯಲ್ಲಿ, ಆಧುನಿಕ ಪೀಳಿಗೆಯಲ್ಲಿ ನನ್ನ ವಿಶ್ವಾಸ. ಅವರುಗಳಿಂದ ಬರುತ್ತಾರೆ ನನ್ನ ಯೋಜನೆಗಳನ್ನು ಕಾರ್ಯಗತಗೊಳಿಸುವ ಕರ್ಮನಿಷ್ಠರು. ಸಿಂಹದೋಪಾದಿಯಲ್ಲಿ ಎಲ್ಲ ಸಮಸ್ಯೆಗಳನ್ನೂ ಅವರು ಬಗೆಹರಿಸುತ್ತಾರೆ.'' ಇದರಂತೆ ಸ್ವಾಮಿ ವಿವೇಕಾನಂದರ ಚಾರಿತ್ರ್ಯ ನಿರ್ಮಾಣ - ದೇಶ ನಿರ್ಮಾಣ ಮಾಡುವ ಸಂದೇಶವನ್ನು ಯುವ ಜನತೆಗೆ ತಲುಪಿಸಲು ರಾಮಕೃಷ್ಣ ಆಶ್ರಮಗಳು ಒಂದು ದಿನದ ಹಾಗೂ ಆವಾಸಿಕ ಶಿಬಿರಗಳನ್ನು ನಡೆಸುತ್ತವೆ. ವಿದ್ಯಾರ್ಥಿಗಳ ರೂವಾರಿಗಳಾದ ಶಿಕ್ಷಕರಿಗೂ ಪ್ರತ್ಯೇಕವಾದ ಶಿಬಿರಗಳಾಗುತ್ತವೆ. ಇದರೊಂದಿಗೆ ರಾಮಕೃಷ್ಣ ಭಾವಧಾರೆಯ ಸಂನ್ಯಾಸಿಗಳು ನಿಯಮಿತಾಗಿ ಶಾಲಾಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಾರೆ.

ವಿದ್ಯಾರ್ಥಿಗಳಿಗಾಗೆ ಹಾಗೂ ಶಿಕ್ಷಕರಿಗಾಗಿ ನಡೆಯುವ ಕೆಲವು ಶಿಬಿರಗಳ ರೂಪುರೇಖೆಗಳು ಹೀಗಿವೆ: ಮಂಗಳೂರಿನ ಆಶ್ರಮವು ವರ್ಷಕ್ಕೊಮ್ಮೆ ಪಿ.ಯು.ಸಿ.ಯಿಂದ ಸ್ನಾತಕೋತ್ತರ ಪದವಿವರೆಗಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಸ್ಫೂರ್ತಿ, ಶಕ್ತಿ ಎಂಬ ಶಿಬಿರಗಳನ್ನು ಮತ್ತು ಶ್ರದ್ಧಾ, ಮೇಧಾ, ಪ್ರಜ್ಞಾ ಎಂಬ ಶಾಲಾ-ಕಾಲೇಜಿನ ಅಧ್ಯಾಪಕರ ಶಿಬಿರಗಳನ್ನು ನಡೆಸುತ್ತದೆ. ಈ ಶಿಬಿರಗಳಲ್ಲಿ ಸಂನ್ಯಾಸಿಗಳೊಬ್ಬರು, ಕಾರ್ಪೊರೇಟ್ ಜಗತ್ತಿನ CEO, ರಾಜ್ಯ ಅಥವಾ ಕೇಂದ್ರ ಸರ್ಕಾರದ ಮಂತ್ರಿಗಳೊಬ್ಬರು ಮತ್ತು ಯುವ ಸಾಧಕರೊಬ್ಬರರು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾರೆ ಮತ್ತು ಚರ್ಚಾಕೂಟಗಳೂ ಇರುತ್ತವೆ. ಬೆಳಗಾವಿಯ ಆಶ್ರಮವು ವರ್ಷಕ್ಕೆ ಮೂರು ಬಾರಿ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಮೂರು ದಿನಗಳ ಆವಾಸಿಕ ಶಿಬಿರವನ್ನು ನಡೆಸುತ್ತದೆ. ಮೈಸೂರು ಆಶ್ರಮದ ಅಂಗವಾದ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ವರ್ಷವಿಡೀ ಒಂದು ದಿನದ ಹಾಗೂ ೨-೭ ದಿನಗಳ ಆವಾಸಿಕ ಶಿಬಿರಗಳು ಮೈಸೂರು ನಗರ ಮತ್ತು ಜಿಲ್ಲೆಗಳಲ್ಲಿನ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ನಡೆಯುತ್ತವೆ.

ರಿಂಸೆಯಲ್ಲಿ ವಿದ್ಯಾರ್ಥಿಗಳ ಶಿಬಿರಗಳಲ್ಲಿ ಸಂನ್ಯಾಸಿಗಳು ಮತ್ತು ಹಿರಿಯ ಸಂಪನ್ಮೂಲ ವ್ಯಕ್ತಿಗಳು ಸ್ವಾಮಿ ವಿವೇಕಾನಂದರ ಸಂದೇಶ ಹಾಗು ವಿದ್ಯಾರ್ಜನೆಗೆ ಉಪಯುಕ್ತವಾದ ವಿಷಯಗಳನ್ನು ಸಂವಾದಾತ್ಮಕ ವಿಧಾನದಲ್ಲಿ ನಡೆಸುತ್ತಾರೆ. 'ನಿನ್ನಲ್ಲಿ ನಿನಗೆ ನಂಬಿಕೆಯಿರಲಿ', 'ವೈಫಲ್ಯಗಳ ನಿರ್ವಹಣೆ', 'ನಿನ್ನ ಏಳ್ಗೆಗೆ ನೀನೇ ಶಿಲ್ಪಿ', 'ಏಕಾಗ್ರತೆಯ ಕಲೆ' ಮುಂದಾದ ವಿಷಯಗಳು ವಿದ್ಯಾರ್ಥಿಗಳ ನೈತಿಕ-ಬೌದ್ಧಿಕ-ಕ್ರಿಯಾತ್ಮಕ ಶಕ್ತಿಗಳನ್ನು ಬೆಳೆಸುತ್ತದೆ. ಬೇಸಿಗೆಯ ರಜಾದಿನಗಳಲ್ಲಿ ೮,೯,೧೦ನೇ ತರಗತಿಯ ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕವಾಗಿ ಏಳು ದಿನಗಳ ಕಾಲ ಆವಾಸಿಕ ಶಿಬಿರಗಳು ನಡೆಯುತ್ತವೆ. ಕರ್ನಾಟಕದೆಲ್ಲೆಡೆಯಿಂದ ಶಾಲಾ-ಕಾಲೇಜುಗಳು ತಮ್ಮ ಶಿಕ್ಷಕರನ್ನು ತರಬೇತಿಗಾಗಿ ರಿಂಸೆಗೆ ಕಳಿಸಿಕೊಡುತ್ತಾರೆ. ಹಲವಾರು ವರ್ಷಗಳಿಂದ ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರು, ಉಪಪ್ರಾಂಶುಪಾಲರು, ಹಾಗೂ ಶಿಕ್ಷಕರು ವರ್ಷಕ್ಕೆ ಎರಡು ಬಾರಿ ನಡೆಯುವ ಐದು ದಿನಗಳ ಶಿಬಿರಗಳಲ್ಲಿ ದೇಶದೆಲ್ಲೆಡೆಯಿಂದ ಬಂದು ಭಾಗವಹಿಸುತ್ತಾರೆ. ಹಾಗೆಯೇ ಕರ್ನಾಟಕ ಮಿಲ್ಕ್ ಫೆಡರೇಷನ್(ಕೆ.ಎಂ.ಎಫ್ ಅಥವಾ 'ನಂದಿನಿ'), ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್, ಮಂತಾದ ಸರ್ಕಾರಿ ಸಂಸ್ಥೆಗಳ ಮತ್ತು ಖಾಸಗೀ ಸಂಸ್ಥೆಗಳ ಅಧಿಕಾರಿಗಳಿಗೆ ಮತ್ತು ಕರ್ಮಚಾರಿಗಳಿಗೆ ಒಂದು ದಿನದ ಹಾಗೂ ಆವಾಸಿಕ 'ಕರ್ಮಯೋಗಿ' ಶಿಬಿರಗಳು ನಡೆಯುತ್ತವೆ.

ಸ್ವಾಮಿ ವಿವೇಕಾನಂದರ ಭವ್ಯ ಭಾರತದ ಕಲ್ಪನೆ ನನಸಾಗಲು ವಿದ್ಯಾರ್ಥಿಗಳು ತಮ್ಮ ಸುಪ್ತ ಶಕ್ತಿಗಳನ್ನು ಗುರುತಿಸಿ, ಪ್ರಕಾಶಗೊಳಿಸಬೇಕು, ದೇಶ ಕಟ್ಟುವ ಹಾಗೂ ನಡೆಸುವ ಹೊಣೆ ಹೊತ್ತ ಶಿಕ್ಷಕರು ಮತ್ತು ಕರ್ಮಚಾರಿಗಳು ಕರ್ತವ್ಯಗಳನ್ನು ಕರ್ಮಯೋಗಿಗಳಾಗಿ ನಿರ್ವಹಿಸಬೇಕು, ಹಾಗೂ ಸಮಾಜದ ಎಲ್ಲ ವರ್ಗದವರೂ ತಮ್ಮ ಆಧ್ಯಾತ್ಮಿಕ ವಿಕಾಸಕ್ಕೆ ಒತ್ತು ನೀಡಬೇಕು. ಇವುಗಳ ಸಾಧನೆಗೆ ಪೂರಕವಾಗಿವೆ ಕರ್ನಾಟಕದ ರಾಮಕೃಷ್ಣ ಆಶ್ರಮಗಳು ಹಾಗೂ ರಾಮಕೃಷ್ಣ ವಿವೇಕಾನಂದ ಆಶ್ರಮಗಳಲ್ಲಿ ನಡೆಯುತ್ತಿರುವ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಶಿಬಿರಗಳು. ✽